ಕೊಡುತ್ತಿದ್ದಾರೆ ಎಂಬ ಅನುಮಾನದಿಂದ ಎಂಬೆಸಿಯವರು, ನೇರವಾಗಿ ವಿಶ್ವವಿದ್ಯಾಲಯಕ್ಕೆ ಫೋನಾಯಿಸಿ, ವೀಸಾ ಕೋರಿ ಬಂದ ಅಭ್ಯರ್ಥಿಗಳ ಪದವಿಪಟ್ಟಿಯನ್ನು ವಿಚಾರಿಸಿದ್ದರು. ಅವು ನಕಲಿ ಎಂದು ವಿಶ್ವವಿದ್ಯಾಲಯ ಖಾತರಿ ಪಡಿಸಿದ ತಕ್ಷಣವೇ ಪೊಲೀಸ್ ಇಲಾಖೆಗೆ ಫೋನಾಯಿಸಿದ್ದರು. ಆ ಕಾರಣದಿಂದಾಗಿ ಅಚಾನಕ್ಕಾಗಿ ದಾಳಿ ಮಾಡಿದ ಪೊಲೀಸರು, ಅಂತಹ ನಕಲಿ ಪದವಿ ಪಟ್ಟಿ ಹೊಂದಿದ್ದ ಹದಿನೈದು ಜನರನ್ನು ಸೆರೆ ಹಿಡಿದು ಕೊಯಂಬತ್ತೂರಿನ ಸೆಂಟ್ರಲ್ ಜೈಲಿಗೆ ಕಳುಹಿಸಿಕೊಟ್ಟಿತ್ತು. ವೀಸಾ ಪಡೆಯುವ ಮಹತ್ವಾಕಾಂಕ್ಷೆಯಿಂದ ಬಂದ ಹದಿನೈದು ಹುಡುಗರು, ಜೈಲಿನ ಕಂಬಿ ಎಣಿಸಲಾರಂಭಿಸಿದ್ದರು. ಅವರನ್ನು ಜೈಲಿಗೆ ತಳ್ಳುವುದಕ್ಕೆ ಮುಂಚೆ ಸಾಲಾಗಿ ನಿಲ್ಲಿಸಿ, ಒಂದು ಫೋಟೊ ತೆಗೆದಿದ್ದರು. ಎಲ್ಲರೂ ಸೂಟು ಬೂಟು ಟೈ ಕಟ್ಟಿಕೊಂಡಿದ್ದರು. ಆ ಫೋಟೊದ ಜೊತೆಯಲ್ಲಿ ಈ ವರದಿ ಪ್ರಕಟವಾಗಿತ್ತು.

ಆ ಫೋಟೊ ಅಷ್ಟೇನೂ ಸ್ಪಷ್ಟವಾಗಿರಲಿಲ್ಲ. ತುಂಬಾ ಕೆಳ ದರ್ಜೆಯ ಮುದ್ರಣದ ಆ ಪತ್ರಿಕೆಯಲ್ಲಿ ಯಾವ ಫೋಟೊಗಳೂ ಸ್ಪಷ್ಟವಾಗಿರಲಿಲ್ಲ. ಇದಂತೂ ತುಂಬಾ ಪುಟ್ಟ ಫೋಟೊ ಆಗಿತ್ತು. ಆದರೂ ಶ್ರೀನಿವಾಸುಲು ಆ ಹದಿನೈದು ಜನರ ಮಧ್ಯದಲ್ಲಿದ್ದ ವ್ಯಕ್ತಿಯ ಮೇಲೆ ಬೆರಳನ್ನಿಟ್ಟು "ಇದು ವೆಂಕಯ್ಯ ಸಾರ್. ಅನುಮಾನವೇ ಇಲ್ಲ" ಎಂದು ಹೇಳಿದ. ವಿಷಯವನ್ನು ಅರ್ಥ ಮಾಡಿಕೊಳ್ಳಲೇ ನನಗೆ ಭಯವಾಯ್ತು. ಆ ಫೋಟೊವನ್ನು ದಿಟ್ಟಿಸಿ ನೋಡಿದೆ. ಅದು ವೆಂಕಯ್ಯನೇ ಎಂದೆನ್ನಿಸಿತು. ಯಾಕೋ ಮನಸ್ಸಿಗೆ ತುಂಬಾ ನೋವಾಯ್ತು.

★★★

ಖಚಿತವಾಗಿ ಘಟನೆಗಳು ಹೇಗೆ ನಡೆದಿವೆ ಎನ್ನುವುದು ನನಗೆ ಗೊತ್ತಾಗಲಿಲ್ಲ. ಆದರೆ ಐಟಿ ಪ್ರಪಂಚದಲ್ಲಿ ಹಲವು ವರ್ಷಗಳ ಕಾಲ ಕೆಲಸ ಮಾಡಿರುವುದರಿಂದ ಸ್ಥೂಲವಾಗಿ ನಡೆದ ಘಟನೆಗಳನ್ನು ಕಲ್ಪಿಸಿ ಹೆಣೆಯುವುದು ನನಗೆ ಸಾಧ್ಯವಾಯ್ತು. ಕಾಲೇಜಿನ ಕೊನೆಯ ವರ್ಷದಲ್ಲಿ ಪ್ರೀತಿಯ ಬಲೆಯಲ್ಲಿ ಸಿಕ್ಕ ವೆಂಕಯ್ಯ, ಅಂತಹ ಒಳ್ಳೆಯ ಅಂಕಗಳನ್ನು ಗಳಿಸಿರಲಿಲ್ಲ. ಆದರೂ ಹೇಗೋ ನಿಭಾಯಿಸಿ ಒಂದು ಕೆಲಸವನ್ನು ಸಂಪಾದಿಸಿಕೊಂಡಿದ್ದ. ಅನಂತರದ ದಿನಗಳಲ್ಲಿ ಪ್ರೀತಿಯ ನಶೆಯಿಂದ ಹೊರ ಬಂದು ಉದ್ಯೋಗದಲ್ಲಿ ಸಂಪೂರ್ಣವಾಗಿ ತೊಡಗಿಕೊಂಡಿದ್ದಾನೆ. ವೃತ್ತಿಯಲ್ಲಿ ಪ್ರಗತಿ ಹೊಂದಿದ್ದಾನೆ. ಬದುಕಿನಲ್ಲಿ ಯಶಸ್ಸು ಬಂದಂತೆಲ್ಲಾ ಅವನ ಆತ್ಮಸ್ಥೈರ್ಯ ಹೆಚ್ಚಾಗುತ್ತಾ ಹೋಗಿ ಅದು ಅಹಂಕಾರದ ಮಟ್ಟವನ್ನು ಮುಟ್ಟಿದೆ. ನೈತಿಕತೆಯ ಎಲ್ಲೆ ಮೀರಿ, ಹಣದ ದಾಹಕ್ಕೆ ಬಾಯ್ಬಿಟ್ಟು ನಿಂತಿದೆ.

ನಮ್ಮ ಕಂಪೆನಿಯಿಂದ ಅಮೆರಿಕಾಕ್ಕೆ ಹೋಗಲು ಸಾಧ್ಯವೇ ಇಲ್ಲವೆಂದು ಗೊತ್ತಾದ ಮೇಲೆ, ಬೇರೆ ಮಾರ್ಗಗಳ ಶೋಧ ಮಾಡಿದ್ದಾನೆ. ಆದರೆ ತನ್ನ ಕಡಿಮೆ ಅಂಕದ ಪದವಿ ಪ್ರಮಾಣಪತ್ರ ಹೊಸ ಕೆಲಸದ ಪ್ರಯತ್ನಕ್ಕೆ ಅಡ್ಡಿ ಬರುತ್ತದೆಂದು ಅವನಿಗೆ ಅರ್ಥವಾಗಿದೆ. ಆ ಕಾರಣಕ್ಕಾಗಿಯೇ ಯಾವುದೋ ಅಡ್ಡದಾರಿ ಹಿಡಿದು, ದೂರಶಿಕ್ಷಣ ನೀಡುವ ಒಂದು ಭ್ರಷ್ಟ ವಿಶ್ವವಿದ್ಯಾನಿಲಯದಿಂದ ಹೆಚ್ಚಿನ ಅಂಕದ ಪದವಿ ಪ್ರಮಾಣ ಪತ್ರವನ್ನು ಸಂಪಾದಿಸಿದ್ದಾನೆ. ಹೇಗೂ ಉದ್ಯೋಗದಲ್ಲಿ ತಾನು ಸಮರ್ಥ ಎನ್ನುವುದು ಅವನಿಗೆ ಗೊತ್ತಿದೆ. ಅಂದ ಮೇಲೆ ಈ ಜುಜುಬಿ ಪದವಿ ಪ್ರಮಾಣಪತ್ರವನ್ನು ನಕಲು ಮಾಡಿಸಲು ಯಾಕೆ ಅಂಜಬೇಕು? ಎನ್ನುವುದು ಅವನ ನಿಲುವಾಗಿದೆ. ಹಲವು ಪ್ರಯತ್ನಗಳ ನಂತರ ಒಂದು ಒಳ್ಳೆಯ ಕಂಪೆನಿಯಿಂದ ಉದ್ಯೋಗ ಸಿಕ್ಕಿದೆ. ಅವರು ಅಮೆರಿಕಾಕ್ಕೆ ಕಳುಹಿಸಿಕೊಡಲು ಒಪ್ಪಿದ್ದಾರೆ. ಅದಕ್ಕಾಗಿ ತಕ್ಷಣವೇ ಎಚ್1 ವೀಸಾ ಪಡೆದುಕೊಳ್ಳಬೇಕೆಂದು ಹೇಳಿದ್ದಾರೆ. ಇಂಗ್ಲೆಂಡಿನಲ್ಲಿಯೇ ಅಮೆರಿಕಾದ ವೀಸಾವನ್ನು